ಸಾರಿಗೆ ಇಲಾಖೆ
TRANSPORT DEPARTMENT

ಸಂಖ್ಯೆ: ಸಾಆ/ಸಿಬ್ಬಂದಿ-1/ವೃಂವ-159/1991-92

ಸಾರಿಗೆ ಮತ್ತು ರಸ್ತೆ ಸುರಕ್ಷತೆ
ಆಯುಕ್ತರ ಕಛೇರಿ, 1ನೇ ಮಹಡಿ,
ಬಿ.ಎಂ.ಟಿ.ಸಿ. ಸಂಕೀರ್ಣ, ಕೆ.ಹೆಚ್. ರಸ್ತೆ,
ಶಾಂತಿನಗರ, ಬೆಂಗಳೂರು-27.
ದಿನಾಂಕ: 01-04-2024.

ಇವರಿಗೆ,

ರಾಜ್ಯದ ಎಲ್ಲಾ ಅಪರ/ ಜಂಟಿ ಸಾರಿಗೆ ಆಯುಕ್ತರುಗಳಿಗೆ.

ರಾಜ್ಯದ ಎಲ್ಲಾ ಉಪ ಸಾರಿಗೆ ಆಯುಕ್ತರು ಹಾಗೂ ಹಿರಿಯ ಪ್ರಾದೇಶಿಕ /
ಪ್ರಾದೇಶಿಕ / ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ
(ತನಿಖಾ ಠಾಣೆಗಳೂ ಸೇರಿದಂತೆ).

ಮಾನ್ಯರೆ,

ವಿಷಯ : ಸಾರಿಗೆ ಇಲಾಖೆಯ ತಾತ್ಕಾಲಿಕ ಹುದ್ದೆಗಳನ್ನು ಒಂದು ವರ್ಷದ ಅವಧಿಗೆ ಮುಂದುವರೆಸಿ ಆದೇಶ ನೀಡಿರುವ ಬಗ್ಗೆ.

ಉಲ್ಲೇಖ : ಸರ್ಕಾರದ ಆದೇಶ ಸಂಖ್ಯೆ: ಟಿಡಿ 18 ಟಿಡಿಎಸ್ 2022, ದಿನಾಂಕ: 15-03-2024.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸಾರಿಗೆ ಇಲಾಖೆಯಲ್ಲಿ ಸೃಜಿಸಲಾಗಿರುವ ವಿವಿಧ ವೃಂದದ ಒಟ್ಟು 706 ತಾತ್ಕಾಲಿಕ ಹುದ್ದೆಗಳನ್ನು ಸಾರ್ವಜನಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ದಿನಾಂಕ: 01-04-2024 ರಿಂದ 31-03-2025 ರವರೆಗೆ ಒಂದು ವರ್ಷದ ಅವಧಿಗೆ ಮುಂದುವರೆಸಲು ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ಮಂಜೂರಾತಿ ನೀಡಲಾಗಿದೆ.

ಆದ್ದರಿಂದ, ಉಲ್ಲೇಖಿತ ಸರ್ಕಾರದ ಆದೇಶದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸುತ್ತಾ, ಅದರಂತೆ ಮುಂದಿನ ಕ್ರಮವಹಿಸಲು ಈ ಮೂಲಕ ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ,

ಸಹಿ/-
ಆಯುಕ್ತರು,
ಸಾರಿಗೆ ಮತ್ತು ರಸ್ತೆ ಸುರಕ್ಷತೆ,
ಬೆಂಗಳೂರು.

**ಪ್ರತಿಯನ್ನು:-** ಅಪರ ಸಾರಿಗೆ ಆಯುಕ್ತರು, ಪರಿಸರ ಮತ್ತು ಇ-ಆಡಳಿತ ವಿಭಾಗ ಇವರಿಗೆ ಮಾಹಿತಿಗಾಗಿ ಹಾಗೂ ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸಲು ಕ್ರಮವಹಿಸುವಂತೆ ತಿಳಿಸಿದೆ.

ಆಯುಕ್ತರು,
ಸಾರಿಗೆ ಮತ್ತು ರಸ್ತೆ ಸುರಕ್ಷತೆ,
ಬೆಂಗಳೂರು.

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಸಾರಿಗೆ ಇಲಾಖೆಯಲ್ಲಿನ ತಾತ್ಕಾಲಿಕ ಹುದ್ದೆಗಳನ್ನು ದಿನಾಂಕ:01-04-2024 ರಿಂದ ಒಂದು ವರ್ಷದ ಅವಧಿಗೆ ಮುಂದುವರೆಸುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಟಿಡಿ 18 ಟಿಡಿಎಸ್ 2022, ದಿನಾಂಕ: 31-03-2023.
2. ಸಾರಿಗೆ ಆಯುಕ್ತರ ಪತ್ರ ಸಂ: ಸಾಆ/ಸಿಬ್ಬಂದಿ-1/ವೃವ-159/1991-92, ದಿನಾಂಕ:02-03-2024.

Establishment Section
Date: 25 MAR 2024
Sign.:..........

ಸಾರಿಗೆ ಆಯುಕ್ತರ ಕಛೇರಿ
ಬೆಂಗಳೂರು
ದಿನಾಂಕ: 18 MAR 2024

****

**ಪ್ರಸ್ತಾವನೆ:**

ಓದಲಾದ ಕ್ರಮ ಸಂಖ್ಯೆ **(1)** ರ ಆದೇಶದಲ್ಲಿ, ಸಾರಿಗೆ ಇಲಾಖೆಯಲ್ಲಿ ಸೃಜಿಸಲ್ಪಟ್ಟಿರುವ ವಿವಿಧ ವೃಂದಗಳ ಒಟ್ಟು 706 ತಾತ್ಕಾಲಿಕ ಹುದ್ದೆಗಳನ್ನು ಸಾರ್ವಜನಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ದಿನಾಂಕ:01-04-2023 ರಿಂದ 31-03-2024 ರವರೆಗೆ ಒಂದು ವರ್ಷದ ಅವಧಿಗೆ ಮುಂದುವರೆಸಿ ಆದೇಶಿಸಲಾಗಿದೆ.

ಓದಲಾದ ಕ್ರಮ ಸಂಖ್ಯೆ **(2)** ರ ಸಾರಿಗೆ ಆಯುಕ್ತರ ಪತ್ರದಲ್ಲಿ, ವಿವಿಧ ವರ್ಗಗಳ ವಾಹನ ಸಂಖ್ಯೆ ಪ್ರತಿ ವರ್ಷವೂ ಗಣನೀಯವಾಗಿ ಹೆಚ್ಚಾಗುತ್ತಿದ್ದು, ಸಾರ್ವಜನಿಕರ ಬಾಗಿಲಿಗೆ ಸೇವೆ ಒದಗಿಸಲು ಸರ್ಕಾರವು ಹೊಸದಾಗಿ ಕಛೇರಿಗಳನ್ನು ಪ್ರಾರಂಭಿಸುತ್ತದೆ. ಆದರೆ ಈ ಹೊಸ ಕಛೇರಿಗಳಿಗೆ ಅವಶ್ಯವಿರುವ ಸಿಬ್ಬಂದಿಯನ್ನು ಮಾತ್ರ ಹೊಸದಾಗಿ ಸೃಜಿಸಿದ್ದು ಹಾಲಿ ಇರುವ ಕಛೇರಿಗಳಿಗೆ ಹೊಸ ಹುದ್ದೆಗಳನ್ನು ಸೃಜಿಸದೇ ಇರುವುದರಿಂದ ಹೆಚ್ಚುತ್ತಿರುವ ಸಾರ್ವಜನಿಕ ಕೆಲಸಗಳನ್ನು ಸುಸೂತ್ರವಾಗಿ ನಿರ್ವಹಿಸಲು ಅನುವಾಗುವಂತೆ 706 ತಾತ್ಕಾಲಿಕ ಹುದ್ದೆಗಳನ್ನು ಖಾಯಂಗೊಳಿಸುವಂತೆಯೂ, ಒಂದು ವೇಳೆ ಖಾಯಂಗೊಳಿಸಲು ತಡವಾದಲ್ಲಿ ಅವುಗಳನ್ನು ದಿನಾಂಕ: 01-04-2024 ರಿಂದ ಒಂದು ವರ್ಷದ ಅವಧಿಗೆ ಮುಂದುವರೆಸಿ ಸರ್ಕಾರದ ಆದೇಶ ಹೊರಡಿಸುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸಾರಿಗೆ ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು, ಈ ಕೆಳಕಂಡಂತೆ ಆದೇಶಿಸಿದೆ.

4/18/23-24

**ಸರ್ಕಾರದ ಆದೇಶ ಸಂಖ್ಯೆ: ಟಿಡಿ 18 ಟಿಡಿಎಸ್ 2022,**
**ಬೆಂಗಳೂರು, ದಿನಾಂಕ: 15-03-2024.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರವು, ಸಾರಿಗೆ ಇಲಾಖೆಯಲ್ಲಿ ಸೃಜಿಸಲಾಗಿರುವ ಈ ಕೆಳಕಂಡ ವಿವಿಧ ವೃಂದದ ಒಟ್ಟು 706 ತಾತ್ಕಾಲಿಕ ಹುದ್ದೆಗಳನ್ನು ಸಾರ್ವಜನಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ದಿನಾಂಕ:01-04-2024 ರಿಂದ ದಿನಾಂಕ:31-03-2025 ರವರೆಗೆ (ಒಂದು ವರ್ಷದ ಅವಧಿಗೆ) ಮುಂದುವರೆಸಲು ಮಂಜೂರಾತಿ ನೀಡಿ ಆದೇಶಿಸಿದೆ.

| Sl. No | Particulars | Pay Scale | No. of Posts |
|---|---|---|---|
| 1 | Additional Commissioner for Transport | 90500-123300 | 1 |
| 2 | Joint Commissioner for Transport | 74400-109600 | 1 |
| 3 | Accounts Officer | 52650-97100 | 2 |
| 4 | Regional Transport Officer | 52650-97100 | 14 |
| 5 | Asst. Regional Transport Officer | 43100-83900 | 48 |
| 6 | Asst. Regional Transport Officer ( Admin) | 43100-83900 | 5 |
| 7 | Ass. Law Officer | 43100-83900 | 1 |
| 8 | Senior Inspector of Motor Vehicles | 40900-78200 | 92 |
| 9 | Accounts Superintendents | 40900-78200 | 9 |
| 10 | Treasury Officer | 40900-78200 | 3 |

--2

18/03/24

1319
25/03/24

| | | | |
|---|---|---|---|
| 11 | Superintendents | 37900-70850 | 40 |
| 12 | Asst. Statistical Officer | 37900-70850 | 1 |
| 13 | Inspector of Motor Vehicles | 33450-62600 | 113 |
| 14 | First Division Assistant | 27650-52650 | 130 |
| 15 | Auditor | 27650-52650 | 1 |
| 16 | Stenographer | 27650-52650 | 17 |
| 17 | Second Division Assistant | 21400-42000 | 144 |
| 18 | Typist | 21400-42000 | 32 |
| 19 | Driver | 21400-42000 | 43 |
| 20 | Treasury Guard | 18600-32600 | 9 |
| | **Total Posts** | | **706** |

ಈ ಆದೇಶವನ್ನು ಸರ್ಕಾರದ ಆದೇಶ ಸಂ: ಎಫ್‌ಡಿ 01 ಟಿಎಫ್‌ಪಿ 1996, ದಿನಾಂಕ:10-07-1996 ರಲ್ಲಿ ಆರ್ಥಿಕ ಇಲಾಖೆಯು ಇಲಾಖಾ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಲಾಗಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

Pushpa v.s.
(ಪುಷ್ಪ ವಿ.ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಾರಿಗೆ ಇಲಾಖೆ.

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಆಡಿಟ್-1)/(ಆಡಿಟ್-2) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ:5398 ಹಾಗೂ ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5359, ಬೆಂಗಳೂರು-560001.
2. ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ, ಟಿ.ಟಿ.ಎಂ.ಸಿ. ಸಂಕೀರ್ಣ, 1ನೇ ಮಹಡಿ, 'ಎ' ಬ್ಲಾಕ್, ಶಾಂತಿನಗರ, ಬೆಂಗಳೂರು.

**ಪ್ರತಿ:**

1. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಾರಿಗೆ ಇಲಾಖೆ.
2. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಸಾರಿಗೆ ಇಲಾಖೆ.
3. ಹೆಚ್ಚುವರಿ ಪ್ರತಿಗಳು / ಶಾಖಾ ರಕ್ಷಾ ಕಡತ / ಒ.ಡಿ.ಜಿ.ಸಿ.